ಶ್ರೀ ಬಿ. ರಾಚಯ್ಯ.—ನಾವು ಜಿರ್ಲಾವಾರು ಸೀಟುಗಳನ್ನು ಹಂಚುತ್ತಾ ಇಲ್ಲ.

ಶ್ರೀ ಜಿ. ದುಗ್ಗಪ್ಪ.—ಹಳ್ಳಿಗಾಡಿನಲ್ಲಿರತಕ್ಕ ರೈತರ ಮಕ್ಕಳಿಗೆ ಅಗ್ರಿಕಲ್ಚರಲ್ ಕಾಲೇಜಿನಲ್ಲಿ ಹೆಚ್ಚಿನ ಪ್ರವೇಶಾವಕಾಶವನ್ನು ದೊರಕಿಸುವ ದೃಷ್ಟಿಯಿಂದ ತಮ್ಮ ರೂಲ್ಸ್‌ಅನ್ನು ಸ್ವಲ್ಪ ಬದಲಾವಣೆ ಮಾಡುತ್ತೀರಾ ! ಮತ್ತು ನಮ್ಮ ನೆರೆರಾಜ್ಯವಾದ ಮದ್ರಾಸ್ ರಾಜ್ಯದಲ್ಲಿ ಜಿರ್ಲಾವಾರು ಸೀಟುಗಳನ್ನು ಕೊಡುತ್ತಿದ್ದಾರೆಂದು ನಾನು ಕೇಳಿದ್ದೇನೆ. ಆದ್ದರಿಂದ ಅದೇ ತರಹ ಇಲ್ಲಿಯೂ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಸ್ವಾಮಿ, ನಮ್ಮ ಮೈಸೂರು ಹೈಕೋರ್ಟ್‌ನವರು ಜಿರ್ಲಾವಾರು ಸೀಟು ರಿಜರ್ವೇಷನ್ ಮಾಡುವುದು ತಪ್ಪಾಗುತ್ತದೆ, ಅದು ರಾಜ್ಯಾಂಗಕ್ಕೆ ವಿರೋಧ ಎಂದು ತೀರ್ಮಾನ ಕೊಟ್ಟಿರುವುದರಿಂದ ಅದನ್ನು ನಾವು ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಸ್ವಾಮಿ, ಈಗ ನಮ್ಮ ರಾಜ್ಯದಲ್ಲಿರತಕ್ಕ ಅನೇಕ ಪಾಲಿಟೆಕ್ನಿಕ್ ಸ್ಕೂಲು ಮತ್ತು ಕಾಲೇಜುಗಳಿಗೆ ಸಾಕಷ್ಟು ವಿದ್ಯಾರ್ಥಿಗಳು ಹೋಗದೆ ಅವುಗಳು ಖಾಲಿ ಇರುವುದರಿಂದ ಆ ಸ್ಕೂಲುಗಳಲ್ಲಿ ಅಗ್ರಿಕಲ್ಚರ್ ಡಿಪ್ಲೊಮಾ ಕೋರ್ಸ್ ಅನ್ನು ತೆಗೆಯುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಎಲ್ಲಾ ಕಡೆಗಳಲ್ಲೂ ಪಾಲಿಟೆಕ್ನಿಕ್ ಸ್ಕೂಲುಗಳನ್ನು ಕ್ಲೋಜ್‌ಮಾಡಿ ಅಗ್ರಿಕಲ್ಚರ್ ಡಿಪ್ಲೊಮಾಕೋರ್ಸ್ ತೆಗೆಯುವುದಕ್ಕಾಗುವುದಿಲ್ಲ.

QUESTIONS FOR ANSWERS ON THE DAY

(but not taken up)

Kanakanal Tank at Indi Taluk

377. Sri S. S. ARAKERI (Balloli).—

Will the Minister of State for Minor Irrigation be pleased to state :—

(*a*) the total estimate of Kanakanal Tank at Indi taluk in Bijapur Distsict ;

(*b*) the total acres of land proposed to be irrigated ;

(*c*) when the work will be commenced actually ?

Sri A. J. DODDAMETI (Minister of State for Minior Irrigation).—

(*a*) Fresh Plans and Estimates are under preparation in the Department.

(*b*) Does not arise in view of reply to clause (*a*).

(*c*) Does not arise in view of reply to clause (*a*)